**ಸಾಕ್ಷಿಯನ್ನು ದಿಃ *23/07/2025* ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**
**ಪಾಟೀ ಸವಾಲು ಃ ಶ್ರೀ ಎಎಸಎಸ ವಕೀಲರಿಂದ 2 ನೇ ಎದುರುದಾರರ** ಪರವಾಗಿ.

ಮೃತ ನಾಗಪ್ಪ ನನ್ನ ಪತಿಯಾಗಬೇಕು. ನನಗೆ ಮತ್ತು ನನ್ನ ಪತಿಗೆ ನಾಲ್ಕು ವರ್ಷಗಳ ಅಂತರವಿರುತ್ತದೆ. ಅಪಘಾತ ಸಮಯದಲ್ಲಿ ನನ್ನ ಪತಿಯ ವಯಸ್ಸು 48 ಇದ್ದು, ಹೊಲಮನಿ ಕೆಲಸ ಮಾಡುತ್ತಿದ್ದರು. ನನ್ನ ಪತಿಗೆ ತಿಂಗಳಿಗೆ 25 ಸಾವಿರ ರೂಪಾಯಿ ಉತ್ಪನವಿರುವ ಕುರಿತು ದಾಖಲೆ ಹಾಜರುಪಡಿಸಿಲ್ಲ. ನಮಗೆ ಬಿಪಿಎಲ ಪಡಿತರ ಚೀಟಿ ಇರುತ್ತದೆ. ನನ್ನ ಪತಿಯ ವೃತ್ತಿ ಮತ್ತು ಸಂಪಾದನೆ ಕುರಿತು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಶಾಲೆ ಕಲಿತಿಲ್ಲ, ನನಗೆ ಈಗ 44 ವರ್ಷ. ಅಪಘಾತ ಸಮಯದಲ್ಲಿ ನನ್ನ ಪತಿಗೆ 55 ವರ್ಷಕ್ಕಿಂತ ಹೆಚ್ಚಿನ ವಯಸ್ಸು ಇತ್ತು ಎಂದರೆ ಸರಿಯಲ್ಲ.

ಅಪಘಾತವು ಗರಗ ಕ್ರಾಸ ಹತ್ತಿರ ಧಾರವಾಡ ಬೆಳಗಾವಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಆಗಿರುತ್ತದೆ. ಸದರಿ ರಾಷ್ಟ್ರೀಯ ಹೆದ್ದಾರಿಗೆ ಎರಡು ಬದಿಯಲ್ಲಿ ಸರ್ವಿಸ ರಸ್ತೆ ಇರುತ್ತದೆ ಎಂದರೆ ನಿಜ. ಅಪಘಾತದ ರಸ್ತೆ ಮಧ್ಯದಲ್ಲಿ ರಸ್ತೆ ದಾಟಲು ಜಾಗೆಯಿಲ್ಲ ಎಂದರೆ ನಿಜ. ಹುಬ್ಬಳ್ಳಿಯಿಂದ ಬೆಳಗಾವಿ ಕಡೆಗೆ ಹೋಗುವುದಕ್ಕೆ ರಾಷ್ಟ್ರೀಯ ಹೆದ್ದಾರಿಗೆ ಹತ್ತಿಕೊಂಡು ಸರ್ವೀಸ ರಸ್ತೆಯ ಒಂದು ದಾರಿ ಮಾಡಿರುತ್ತಾರೆ ಎಂದರೆ ನಿಜ. ಅದೇ ರೀತಿ ಬೆಳಗಾವಿಯಿಂದ ಧಾರವಾಡ ಕಡೆಗೆ ಹೋಗುವುದಕ್ಕೆ ರಾಷ್ಟ್ರೀಯ ಹೆದ್ದಾರಿಗೆ ಹತ್ತಿಕೊಂಡು ಸರ್ವೀಸ ರಸ್ತೆಯ ಒಂದು ದಾರಿ ಮಾಡಿರುತ್ತಾರೆ ಎಂದರೆ ನಿಜ. ಅಪಘಾತ ಸ್ಥಳ ಸದರಿ ರಸ್ತೆಗೆ 100 ಫೂಟುಗಳ ದೂರದಲ್ಲಿರುತ್ತದೆ ಎಂದರೆ ನಿಜ. ರಸ್ತೆಯ ಮಧ್ಯ ಡಿವೈಡರ ಇದ್ದು, ವಾಹೋಗು ಬರುವ ವಾಹನಗಳು ಆ ಬದಿಯಿಂದ ಈ ಬದಿಯಿಂದ ಬರುವುದಕ್ಕೆ ಅಥವಾ ದಾಟುವುದಕ್ಕೆ ರಸ್ತೆ ಇರುವುದಿಲ್ಲ ಎಂದರೆ ನಿಜ. ಅಪಘಾತ ಸ್ಥಳದಲ್ಲಿ ಪಾದಚಾರಿಗಳು ದಾಟುವುದಕ್ಕೆ ಜಿಬ್ರಾ ಕ್ರಾಸ ಸಹ ಇರುವುದಿಲ್ಲ ಎಂದರೆ ನಿಜ. ಸರ್ವೀಸ ರಸ್ತೆಗಳಲ್ಲಿ ಹಳ್ಳಿ ಜನರು ಮತ್ತು ಅವರ ವಾಹನಗಳು ಅದೇ ರಸ್ತೆಯಲ್ಲಿ ಓಡಾಡುತ್ತವೆ ಎಂದರೆ ನಿಜ.

ಅಪಘಾತವು ಸಂಜೆ 7 ಗಂಟೆಗೆ ಆಗಿರುತ್ತದೆ. ಆ ಸಮಯದಲ್ಲಿ ಸ್ವಲ್ಪ ಕತ್ತಲು ಆಗಿರುತ್ತದೆ ಎಂದರೆ ಆಗಿರಬಹುದು. ವಾಹನಗಳು ಹೋಗುಬರುವ ಕಾರಣ ಅವುಗಳ ಹೆಡಲೈಟುಗಳು ಕಣ್ಣಿಗೆ ಕುಕ್ಕುತ್ತವೆ ಎಂದರೆ ನಿಜ. ಅಪಘಾತ ಸ್ಥಳದಲ್ಲಿ ಪಾದಚಾರಿಗಳಿಗೆ ದಾಟಲು ಯಾವುದೇ ರಸ್ತೆ ಮತ್ತು

ವ್ಯವಸ್ಥೆ ಇರುವುದಿಲ್ಲ ಎಂದರೆ ಸರಿಯಲ್ಲ. ಅಪಘಾತ ಕಾಲಕ್ಕೆ ನನ್ನ ಪತಿ ಅತೀಯಾಗಿ ಮದ್ಯಪಾನ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಅತೀಯಾದ ಮದ್ಯಪಾನ ಮಾಡಿ, ಹೋಗಿ ಬರದ ವಾಹನಗಳನ್ನುನೋಡದೆ ಅಪಘಾತ ಜಾಗೆಯಲ್ಲಿ ರಸ್ತೆ ದಾಟುವ ವ್ಯವಸ್ಥೆಯಿಲ್ಲದೇಯಿದ್ದರೂ ಸಹ ತನ್ನ ನಿರ್ಲಕ್ಷತನದಿಂದ ರಸ್ತೆ ದಾಟುವ ಪ್ರಯತ್ನದಲ್ಲಿ ಸದರಿಯವರ ತಪ್ಪಿನಿಂದ ಅಪಘಾತವಾಗಿರುತ್ತದೆ ಹೊರತು ಮೋಟಾರುಸೈಕಲ ಚಾಲಕನ ಯಾವುದೇ ತಪ್ಪು ಇರುವುದಿಲ್ಲ ಎಂದರೆ ಸರಿಯಲ್ಲ. ಅತೀಯಾದ ಮದ್ಯಸೇವನೆ ಮಾಡಿರುವ ಕಾರಣ ಅವರಿಗೆ ನೀಡಿರುವ ಚಿಕಿತ್ಸೆಗೆ ಸ್ಪಂದಿಸಿಲ್ಲ ಎಂದರೆ ಸರಿಯಲ್ಲ. ಸದರಿ ಅಪಘಾತವು ನನ್ನ ಪತಿಯ ತಪ್ಪಿನಿಂದ ಆಗಿರುವ ಕಾರಣ ಎದುರುದಾರರು ಯಾವುದೇ ರೀತಿ ಪರಿಹಾರ ಹಣ ಕೊಡಲು ಬಾದ್ಯಸ್ಥರಲ್ಲ ಮತ್ತು ನಾವು ಪಡೆಯಲು ಅರ್ಹರಲ್ಲ ಎಂದರೆ ಸರಿಯಲ್ಲ.

ಅಂತ್ಯಕ್ರಿಯೆಗೆ 50 ಸಾವಿರ ರೂಪಾಯಿ ಖರ್ಚಾಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತ ಪಡಿಸಿದ ಮೋಟಾರುಸೈಕಲ ಚಾಲಕನಿಗೆ ಸೂಕ್ತವಾದ ಚಾಲನಾ ಪರವಾನಿಗೆ ಪತ್ರವಿರಲಾರದ ಕಾರಣ ಸದರಿಯವರು ವಿಮೆ ಷರತ್ತುಗಳನ್ನು ಉಲ್ಲಂಘನೆ ಮಾಡಿದ್ದು, ಆದ್ದರಿಂದ 2 ನೇ ಎದುರುದಾರ ವಿಮೆ ಕಂಪನಿಯವರು ಬಾದ್ಯಸ್ಥರು ಇರುವುದಿಲ್ಲ ಎಂದರೆ ಸರಿಯಲ್ಲ.

***ಮರು ವಿಚಾರಣೆ: ಇಲ್ಲ.***

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

1 ನೇ ಹೆ ಹಿ ದಿ ನ್ಯಾ ಹಾಗೂ ಸಿಜೆಎಂ,
ಧಾರವಾಡ.